**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ.</u>**

# <u>ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 72/2019</u>

**<u>ಫಿರ್ಯಾದಿ :</u>** ರಾಜ್ಯದ ಪರವಾಗಿ ಲಕ್ಕವಳ್ಳಿ ಪೊಲೀಸರು

- ವಿರುದ್ಧ -

**<u>ಆರೋಪಿ/ತರು:</u>**

1) ಮಣಿಕಂಠ ಯಾನೆ ಮಣಿ ಬಿನ್ ಮುನಿಸ್ವಾಮಿ, 24 ವರ್ಷ,

2) ಪಂಪಾ ಯಾನೆ ಪಂಪಾವತಿ ಯಾನೆ ಪ್ರಶಾಂತ ಬಿನ್ ಲೇಟ್ ಪ್ರತಾಪನಾಯ್ಕ, 28 ವರ್ಷ,

ಇಬ್ಬರೂ ವಾಸ : ಸೋಂಪುರ ಗ್ರಾಮ, ಲಕ್ಕವಳ್ಳಿ ಹೋಬಳಿ, ತರೀಕೆರೆ ತಾಲ್ಲೂಕು

**<u>-:ದೋಷಾರೋಪಣೆ:-</u>**

ಶ್ರೀ ಶಿವಕುಮಾರ್.ಆರ್., ಬಿ.ಎ.ಎಲ್., ಎಲ್.ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ ಆದ ನಾನು ಆರೋಪಿತರಾದ ನಿಮ್ಮ ವಿರುದ್ದ ಮಾಡುವ ದೋಷಾರೋಪಣೆ ಏನೆಂದರೆ:-

ಚಾಸಾ-6 ಕೃಷ್ಣಸಿಂಗ್ ಯಾನೆ ಉದಯ್ ಸಿಂಗ್ ರವರು ಬೆಂಗಳೂರಿನ ಯಶವಂತಪುರದಲ್ಲಿ ಜಿ.ಎಸ್.ಗೋಲ್ಡ್ ಎಂಬ ಹೆಸರಿನಲ್ಲಿ ಕಂಪನಿಯನ್ನು ನಡೆಸುತ್ತಿದ್ದು, ದಿನಾಂಕ 11.08.2018 ರಂದು 1 ನೇ ಆರೋಪಿಯಾದ ನೀವು ನಿಮ್ಮ ಮೊಬೈಲ್ ಸಂಖ್ಯೆ 8762548430 ನಿಂದ ಜಿ.ಎಸ್.ಗೋಲ್ಡ್ ಕಂಪನಿಯ ಮೊಬೈಲ್ ಸಂಖ್ಯೆ 8884677111 ನೇದಕ್ಕೆ ಕರೆ ಮಾಡಿ ಲಕ್ಕವಳ್ಳಿಯ ವಿಜಯ ಬ್ಯಾಂಕಿನಲ್ಲಿ ನಾನು 20 ಗ್ರಾಂ ವಡವೆಯನ್ನು ರೂ.30,000/- ಗೆ ಅಡವಿಟ್ಟಿರುತ್ತೇವೆ ಬಿಡಿಸಿಕೊಡಿ ಎಂದು ತಿಳಿಸಿದ್ದು, ಅದರಂತೆ ಚಾಸಾ-6 ರವರು ತಮ್ಮ ಕಂಪನಿಯಲ್ಲಿ ಎಗ್ಸಿಕ್ಯುಟಿವ್ ಆಗಿ ಕೆಲಸ ಮಾಡುವ ಚಾಸಾ-1 ಸತೀಶ್ ರವರ ಹಸ್ತ ರೂ.30,000/- ಹಣ ಹಾಗೂ 1 ನೇ ಆರೋಪಿಯಾದ ನಿಮ್ಮ ಮೊಬೈಲ್ ನಂಬರನ್ನು ಕೊಟ್ಟು ಅವರನ್ನು ಸಂಪರ್ಕಿಸಿ ವಡವೆಗಳನ್ನು ಬಿಡಿಸಿಕೊಂಡು ಬರುವಂತೆ ಕಳುಹಿಸಿದ್ದು, ನಂತರ ದಿನಾಂಕ 13.08.2018 ರಂದು ಬೆಳಗ್ಗೆ ಚಾಸಾ-1 ರವರು ತಮ್ಮ ಮೊಬೈಲ್ ಸಂಖ್ಯೆ 9902787105 ನಿಂದ 1 ನೇ ಆರೋಪಿಯಾದ ನಿಮ್ಮ ಮೊಬೈಲ್ ಸಂಖ್ಯೆಗೆ ಕರೆ ಮಾಡಿದ್ದು, 1 ನೇ ಆರೋಪಿಯಾದ ನೀವು ತರೀಕೆರೆಗೆ ಬರುವಂತೆ ತಿಳಿಸಿದ್ದು, ಅದರಂತೆ ಚಾಸಾ-1 ರವರು ಮಧ್ಯಾಹ್ನ 12.15 ಗಂಟೆಗೆ ತರೀಕೆರೆ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣಕ್ಕೆ ಬಂದಾಗ ಆರೋಪಿತರಾದ ನೀವು ಚಾಸಾ-1 ರವರನ್ನು ಲಕ್ಕವಳ್ಳಿಯ ವಿಜಯ ಬ್ಯಾಂಕಿಗೆ ಹೋಗೋಣವೆಂದು

ತರೀಕೆರೆಯಿಂದ ರಂಗೇನಹಳ್ಳಿಗೆ ಖಾಸಗಿ ಬಸ್ ನಲ್ಲಿ ಕರೆದುಕೊಂಡು ಹೋಗಿ, ಅಲ್ಲಿಂದ ಬಾಡಿಗೆ ಕೊಡುವುದಾಗಿ ಹೇಳಿ ಚಾಸಾ-7 ಪ್ರದೀಪ್ ರವರ ಆಟೋರಿಕ್ಷಾದಲ್ಲಿ ಚಾಸಾ-1 ರವರನ್ನು ಲಕ್ಕವಳ್ಳಿ ಸಮೀಪದ ಭದ್ರಾ ಡ್ಯಾಂ ಹತ್ತಿರ ಕರೆದುಕೊಡು ಹೋಗಿದ್ದು, ಚಾಸಾ-7 ರವರು ಆಟೋರಿಕ್ಷಾ ತೆಗೆದುಕೊಂಡು ವಾಪಸ್ಸು ಬಂದ ನಂತರ ಆರೋಪಿತರಾದ ನೀವು ಚಾಸಾ-1 ರವರಿಗೆ ನಿನ್ನ ಬಳಿ ಇರುವ ಹಣ ಕೊಡು ಇಲ್ಲದಿದ್ದರೆ ನಿನ್ನನ್ನು ಡ್ಯಾಂಗೆ ನೂಕಿ ಸಾಯಿಸುವುದಾಗಿ ಹೆದರಿಸಿ ಚಾಸಾ-1 ರವರ ಬಳಿ ಇದ್ದ ರೂ.30,000/- ಹಣವನ್ನು ಕಿತ್ತುಕೊಂಡು ಓಡಿ ಹೋಗಿರುತ್ತೀರಿ, ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 392 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಎರಡನೇಯದಾಗಿ ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ನೀವು ಚಾಸಾ-1 ರವರಿಗೆ ನಿನ್ನ ಬಳಿ ಇರುವ ಹಣ ಕೊಡು ಇಲ್ಲದಿದ್ದರೆ ನಿನ್ನನ್ನು ಡ್ಯಾಂಗೆ ನೂಕಿ ಸಾಯಿಸುವುದಾಗಿ ಹೆದರಿಸಿ ಜೀವ ಬೆದರಿಕೆ ಹಾಕಿದ್ದು, ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 506 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ನೀವು ಸದರಿ ಆರೋಪಗಳ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗತಕ್ಕುದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ : 16.08.2022

ಸಹಿ

**(ಶಿವಕುಮಾರ್.ಆರ್.)**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.**